# ‘ಸುಧಾ’ ಜೊತೆಗಿನ ಓದುಗರ ಒಡನಾಟ

## ವೈವಿಧ್ಯದ ಆಗರ

ನಾನು 1980ರಿಂದಲೂ ‘ಸುಧಾ’ ಪತ್ರಿಕೆ ಓದುಗ. ನನ್ನ ಪಾಲಿಗೆ ‘ಸುಧಾ’ ಎಂದರೆ ವೈವಿಧ್ಯ. ಸಾಹಿತ್ಯ, ಸಂಗೀತ, ಕ್ರೀಡೆ, ರಾಜಕೀಯ, ಪ್ರವಾಸ, ವ್ಯಕ್ತಿ ವಿಷಯ ಹೀಗೆ ಹಲವು ವಿಶೇಷಗಳ ಆಗರ.

ಚಿಕ್ಕವರಿದ್ದಾಗ ಡಾಬೂ, ಮಜನೂ, ನಾಡಿಗ್‌ರವರ ವ್ಯಂಗ್ಯಚಿತ್ರಗಳು ನಮ್ಮನ್ನು ರಂಜಿಸುತ್ತಿದ್ದವು. ನಂತರ ಧಾರಾವಾಹಿಗಳು, ಅದರಲ್ಲೂ ಎಚ್‌.ಕೆ. ಸುಬ್ಬರಾವ್, ಟಿ.ಕೆ. ರಾಮರಾವ್, ಕೆ.ಟಿ. ಗಟ್ಟಿ, ಯಂಡಮೂರಿ ವೀರೇಂದ್ರನಾಥ್ ಮುಂತಾದ ದಿಗ್ಗಜರ ಧಾರಾವಾಹಿಗಳು ಪ್ರಿಯವಾಗಿದ್ದವು. ನಮ್ಮ ಪಕ್ಕದ ತಾಲ್ಲೂಕಿನವರೇ ಆದ, ಡಿ.ವಿ. ರಾವ್, ದೊಡ್ಡೇರಿಯವರ ಕಥೆಗಳನ್ನು ಇಷ್ಟಪಟ್ಟು ಓದುತ್ತಿದ್ದೆವು. ‘ಸುಧಾ’ದಲ್ಲಿ ಬಂದ ಧಾರಾವಾಹಿಗಳು ಕೆಲವು ಸಿನಿಮಾ ಆಗಿಯೂ ಹಿಟ್ ಆಗಿವೆ.

ಕಾಲಕ್ಕೆ ತಕ್ಕಂತೆ ಬದಲಾವಣೆಗೊಳ್ಳುತ್ತಾ ಬಂದ ‘ಸುಧಾ’ ಎಲ್ಲರಿಗೂ ಪ್ರಿಯ ವಾರಪತ್ರಿಕೆ. ನಾಗೇಶ ಹೆಗಡೆ, ರಹಮತ್ ತರೀಕೆರೆ, ಡಿ.ಜಿ. ಮಲ್ಲಿಕಾರ್ಜುನ, ನೇಮಿಚಂದ್ರ ಮುಂತಾದವರ ಲೇಖನಗಳು ತುಂಬಾ ಉಪಯುಕ್ತ ಹಾಗೂ ಸಂಗ್ರಹಯೋಗ್ಯ. 60 ವರ್ಷ ಒಂದು ವಾರಪತ್ರಿಕೆ ನಡೆಸುವುದು ಸುಲಭದ ಕೆಲಸವಲ್ಲ. ‘ಸುಧಾ’ ಶತಕದತ್ತ ದಾಪುಗಾಲು ಹಾಕಲಿ.

—ಬಿ. ರಾಮಚಂದ್ರ ರಾವ್, ಸಾಗರ

## ಅದ್ಭುತ ಹೂರಣ

ನಾನೂ (ನನ್ನ ಕುಟುಂಬದವರೂ ಸೇರಿದಂತೆ) ‘ಸುಧಾ’ ಹಳೆಯ ಅಭಿಮಾನಿ. ಪತ್ರಿಕೆ ಓದಿದ ನಂತರ ಅನೇಕ ಹೊಸ ಹೊಸ ವಿಷಯಗಳನ್ನು ತಿಳಿದುಕೊಳ್ಳುತ್ತೇನೆ. ಪ್ರಶ್ನೋತ್ತರ, ನೀವು ಕೇಳಿದಿರಿ, ನಿಮ್ಮ ಪುಟ, ಧಾರಾವಾಹಿಗಳು ನನಗೆ ತುಂಬಾ ಮೆಚ್ಚುಗೆ ಆದವು.

ನಾನು ಮಿತ್ರರೊಡನೆ ಹರಟೆಯಲ್ಲಿದ್ದಾಗ ‘ಸುಧಾ’ದಲ್ಲಿ ಪ್ರಕಟಗೊಂಡ ‘ನೀವು ಕೇಳಿದಿರಿ’ ಪ್ರಶ್ನೆಗಳು ಹಾಗೂ ಅವಕ್ಕೆ ಬಂದ ಉತ್ತರಗಳನ್ನು ಹಂಚಿಕೊಳ್ಳುತ್ತಿರುತ್ತೇನೆ. ಅವರೂ ಕೇಳಿ ಖುಷಿಪಡುತ್ತಾರೆ. ಮೊದಲು ‘ಸುಧಾ’ದ ರಕ್ಷಾಪುಟ ದಪ್ಪಗಿರುತ್ತಿತ್ತು. ಈಗ ತೆಳುವಾಗಿದೆ. ಆದರೆ ಒಳಹೂರಣ ಅದ್ಭುತವಾಗಿದೆ. ‘ಸುಧಾ’ ಚಿರಕಾಲ ನಮ್ಮನ್ನು ರಂಜಿಸಲಿ, ಸ್ಫೂರ್ತಿದಾಯಕ ಲೇಖನಗಳಿಂದ ಪ್ರಚೋದಿಸಲಿ ಎಂದು ಹಾರೈಸುತ್ತೇನೆ.

— ಬಿ.ಎನ್. ರಾಮಮೂರ್ತಿ, ಮೈಸೂರು

## ‘ಸುಧಾ’ ಹಾಗೂ ನಮ್ಮಮ್ಮನ ನೆನಪು

ನನ್ನ ಹುಟ್ಟೂರು ನಗರದಿಂದ ಸುಮಾರು ಹತ್ತು ಕಿಲೋ ಮೀಟರ್ ದೂರದ ಪುಟ್ಟ ಹಳ್ಳಿ. ಪಟ್ಟಣಕ್ಕೆ ಹೋಗಬೇಕೆಂದರೆ ಯಾವುದೇ ವಾಹನ ವ್ಯವಸ್ಥೆ ಇಲ್ಲ. ಪತ್ರಿಕೆಗಳು ಬೇಕೆಂದರೆ ನಗರಕ್ಕೆ ಹೋಗಿ ತರಬೇಕಿತ್ತು. ಆದರೆ ಐದು ದಶಕಗಳಿಂದಲೂ ‘ಪ್ರಜಾವಾಣಿ’, ‘ಸುಧಾ’ ನಮ್ಮ ಮನೆಯ ಕಾಯಂ ಅತಿಥಿ. ನಮ್ಮ ಮನೆಯ ದಿನಪತ್ರಿಕೆ, ‘ಸುಧಾ’ ವಾರಪತ್ರಿಕೆ, ಅಂಚೆ ಎಲ್ಲವೂ ಪಟ್ಟಣದ ಅಂಗಡಿಯೊಂದರಲ್ಲಿ ಇಡುವ ವ್ಯವಸ್ಥೆ ಮಾಡಿದ್ದರು ಅಪ್ಪ.




ಮನೆಯ ಹಿರಿಯರು ಯಾರಾದರೂ ಕೆಲಸವಿದ್ದಾಗ ಪೇಟೆಗೆ ಹೋಗಿ ತರುವ ಪದ್ಧತಿ. ಒಮ್ಮೊಮ್ಮೆ ಒಂದು ವಾರದ ದಿನಪತ್ರಿಕೆಗಳು ಒಂದೇ ದಿನ ಬರುತ್ತಿದ್ದುದೂ ಇತ್ತು, ತರುವವರಿಲ್ಲದೆ! ಹೀಗೆ ‘ಸುಧಾ’ ಬಂದ ದಿನ ಖುಷಿಯೋ ಖುಷಿ. ಹೀಗೆ ಬಾಲ್ಯದಿಂದಲೇ ದಿನಪತ್ರಿಕೆ, ವಾರಪತ್ರಿಕೆ ಮನೆಗೆ ತರಿಸಿ ಓದಲು ಪ್ರೇರೇಪಿಸಿದ ಅಪ್ಪ ಅಮ್ಮನಿಗೆ ನಾನೆಂದೂ ಚಿರಋಣಿ.

ನಮ್ಮ ಮನೆಯ ಕೆಲಸದವಳ ಮಗಳಿಗೆ ತನ್ನ ಮೆಚ್ಚಿನ ವಾರಪತ್ರಿಕೆ ‘ಸುಧಾ’ದ ಹೆಸರನ್ನೇ ನಾಮಕರಣ ಮಾಡಿದ್ದಳು ಅಮ್ಮ. ಅಮ್ಮ ಇಂದು ನಮ್ಮೊಂದಿಗೆ ಇಲ್ಲದಿದ್ದರೂ ಈ ಎಲ್ಲ ನೆನಪುಗಳಲ್ಲಿ ಅವಳಿರುವಳು.

— ವಿನುತ ಮುರಳೀಧರ, ಶಿವಮೊಗ್ಗ

## ಮನಮೆಚ್ಚಿದ ‘ನೀವು ಕೇಳಿದಿರಿ’

ನನ್ನ ಮೆಚ್ಚಿನ ಪತ್ರಿಕೆ ಅರವತ್ತರ ವರ್ಷಕ್ಕೆ ಕಾಲಿಟ್ಟಿರುವುದು ಬಹಳ ಸಂತಸದ ಸಂಗತಿ. ನಾನು ಮಾಧ್ಯಮಿಕ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವಾಗಿನಿಂದಲೇ ‘ಸುಧಾ’ ಓದುತ್ತಿದ್ದೆ. ಅದರಲ್ಲಿ ಪ್ರಕಟವಾಗುತ್ತಿದ್ದ ‘ಚಿತ್ರಮಯ ಜ್ಞಾನಕೋಶ’ ಮತ್ತು ಸಮದರ್ಶಿಯವರ ಅಂಕಣ ಬರಹವೆಂದರೆ ನನಗೆ ತುಂಬಾ ಇಷ್ಟವಾಗುತ್ತಿತ್ತು. ‘ನೀವು ಕೇಳಿದಿರಿ’ ಅಂಕಣವನ್ನು ಈಗಲೂ ಓದಿ ಆನಂದಿಸುತ್ತಿದ್ದೇನೆ.

ಏಕೋ ಏನೋ ಕೊರೊನಾ ಬಳಿಕ ನನ್ನ ನೆಚ್ಚಿನ ‘ಸುಧಾ’ ಮುಂಬಯಿಯ ಪುಸ್ತಕದ ಅಂಗಡಿಗಳಿಗೆ ಬರುತ್ತಿಲ್ಲ. ಹಾಗಾಗಿ ಅದನ್ನು ಅಂಚೆ ಮೂಲಕ ತರಿಸಿ ಅದು ಬರುವವರೆಗೆ ಕಾಯಬೇಕಾಗುತ್ತದೆ.

ಸುಮಾರು 40–45 ವರ್ಷಗಳ ಹಿಂದೆ ‘ನೀವು ಕೇಳಿದಿರಿ’ ಅಂಕಣದಲ್ಲಿ ಓದುಗರೊಬ್ಬರು ಕೇಳಿದ ಪ್ರಶ್ನೆಗೆ ‘ಸುಧಾ’ ನೀಡಿದ ಉತ್ತರ ತುಂಬಾ ಮಾರ್ಮಿಕವಾಗಿತ್ತು. ಅದು ಇನ್ನೂ ನನಗೆ ನೆನಪಿದೆ. ಅದು ಹೀಗಿತ್ತು: ಪ್ರಶ್ನೆ: ಶ್ರೀಕೃಷ್ಣನಿಗೂ ತಲೆಬಾಗದವನು ಮತ್ತೆಲ್ಲಿ ಬಾಗುತ್ತಾನೆ? ಉತ್ತರ: ಶ್ರೀಕೃಷ್ಣ ಹೇರ್‌ಕಟಿಂಗ್ ಸಲೂನಿನಲ್ಲಿ ಅವನೂ ಬಾಗುತ್ತಾನೆ, ಅವನಪ್ಪನೂ ಬಾಗುತ್ತಾನೆ.

—ಸೋಮನಾಥ ಎಸ್.ಕರ್ಕೇರ, ಮುಂಬಯಿ

## ‘ಸುಧಾ’ಳೇ ನನ್ನ ಆಯ್ಕೆ

‘ಸುಧಾ’ ಪತ್ರಿಕೆಯನ್ನು ಸುಮಾರು 50 ವರ್ಷಗಳಿಂದ ಓದುತ್ತಿರುವ ನನಗೆ ಕಾರ್ಯಬಾಹುಳ್ಯದ ಕಾರಣ, ಕೆಲವು ದಿನಗಳ ಓದು ತಪ್ಪಿತ್ತು. ಮತ್ತೆ ಓದಲು ಆರಂಭಿಸಿದಾಗ ‘ಸುಧಾ’ ಪತ್ರಿಕೆಯ ಜೊತೆ ಇನ್ನೊಂದು ಪತ್ರಿಕೆಯನ್ನು ಓದಲು ಶುರು ಮಾಡಿದ್ದೆ.

ನಂತರ ಸಮಯಕ್ಕೆ ಅನುಗುಣವಾಗಿ ಒಂದೇ ಪತ್ರಿಕೆಯನ್ನು ಓದುವ ನಿರ್ಣಯಕ್ಕೆ ಬಂದಾಗ ‘ಸುಧಾ’ಳನ್ನೇ ಆಯ್ಕೆ ಮಾಡಿಕೊಂಡೆ. ಇದರಲ್ಲಿರುವ ವಿಷಯ ಸಂಗ್ರಹಣೆ, ಓದಿಸಿಕೊಂಡು ಹೋಗುವ ಪ್ರೇರೇಪಣೆ ಅತ್ಯುತ್ತಮ ಸಂಗತಿ. ಅದರಲ್ಲೂ ‘ನಿಮ್ಮೊಡನೆ’ ಮತ್ತು ‘ವಿಚಾರ ಲಹರಿ’ ಚಿಂತನೆಗೆ ಹಚ್ಚುತ್ತವೆ. ಅರವತ್ತರ ಹಿರಿಯ ನಾಗರಿಕಳಿಗೆ ಶುಭಕಾಮನೆಗಳು.

—ಬಸವರಾಜ ಕೆಂಗನಾಳ ಮುಳವಾಡ